# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 23
ಪಿಡಬ್ಲ್ಯೂ: 03

**ದಿನಾಂಕಃ 18-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿದಾರರ ಹೆಸರು : ದೇವೀರಮ್ಮ

ತಂದೆಯ ಹೆಸರು : ಕೆಂಚಪ್ಪ

ವಯಸ್ಸು : 34 ವರ್ಷ

ಉದ್ಯೋಗ : ಬಿಸಿಯೂಟದ ಅಡಿಗೆ ಕೆಲಸ

ವಾಸ ಸ್ಥಳ : ಬೆಣ್ಣೆಹಳ್ಳಿ

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ**

ಅಸಾ–**1** ಕರಿಯಪ್ಪ ನನ್ನ ಚಿಕ್ಕಪ್ಪ. ಸುಮ ಅಸಾ–**1** ಇವರ ಮಗಳು. ನನಗೆ ತಂಗಿಯಾಗುತ್ತಾಳೆ. ಆಕೆಯನ್ನು ಆರೋಪಿ ನಾರಪ್ಪ ಕೊಲೆ ಮಾಡಿದ್ದಾನೆ. ಆರೋಪಿಯನ್ನು ಈಗ ವಿಸಿ ಮೂಲಕ ನೋಡಿ ಗುರುತಿಸುತ್ತಿದ್ದೇನೆ.

**2.** ದಿನಾಂಕಃ **25–12–2015** ರಂದು ಸುಮ ಮತ್ತು ಆರೋಪಿಯ ಮದುವೆ ಸಿರಿಗೆರೆಯ ಮಠದಲ್ಲಿ ಸಾಮೂಹಿಕ ವಿವಾಹದಲ್ಲಿ ನೆರವೇರಿತ್ತು. ಮದುವೆಯಾದ ನಂತರ ಸುಮ ಗಂಡನ ಊರು ಕೋಣನೂರಿಗೆ ಹೊದಳು. ಗಂಡ ಹೆಂಡತಿ ಸುಮಾರು **4–5** ವರ್ಷ ಚೆನ್ನಾಗಿದ್ದರು. ಅವರಿಗೆ ಒಂದು ಗಂಡು ಮಗು ಆಗಿರುತ್ತದೆ. ನನ್ನ ಚಿಕ್ಕಪ್ಪ ಅಸಾ–**1** ಬಡವನಿದ್ದು ಆತ ಮದುವೆಯಲ್ಲಿ ಯಾವುದೇ ವರದಕ್ಷಿಣೆ ವರೋಪಚಾರ ಕೊಟ್ಟಿರಲಿಲ್ಲ. ಆದರೆ ಕೆಲವು ಸಾಮಾನುಗಳು ಮತ್ತು ಬಟ್ಟೆಗಳನ್ನು ಕೊಟ್ಟಿದ್ದರು.

**3.** ಆರೋಪಿ ಸುಮಾಳಿಗೆ ಮದುವೆಯಲ್ಲಿ ವರದಕ್ಷಿಣೆ ಕೊಟ್ಟಿಲ್ಲ ಈಗ ಹೋಗಿ ತವರುಮನೆಯಿಂದ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೇಳಿ ಪೀಡಿಸುತ್ತಿದ್ದ. ಹೊಡೆಯುವುದು ಬಡಿಯುವುದು ಮಾಡುತ್ತಿದ್ದ. ಸುಮ ಅದನ್ನು ನನಗೆ ಹೇಳಿ

ಅಳುತ್ತಿದ್ದಳು. ಆಕೆಯ ತಾಯಿಯು ತೀರಿಹೋಗಿದ್ದಾಳೆ. ಆರೋಪಿ ಚಿತ್ರದುರ್ಗದಲ್ಲಿ ಕಿರಾಣಿ ಅಂಗಡಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದ. ಆದರೆ ಮನೆಗೆ ಏನೂ ತಂದುಕೊಡುತ್ತಿರಲಿಲ್ಲ. ಜೀವನ ಮಾಡಲು ತುಂಬಾ ಕಷ್ಟವಿದೆ ಎಂದು ಹೇಳಿ ಅಳುತ್ತಿದ್ದಳು. ಆರೋಪಿ ತನ್ನ ಸಂಬಳವನ್ನು ಕುಡಿಯಲು ಮತ್ತು ಆಡಲು ಬಳಸುತ್ತಿದ್ದ.

**4.** ದಿನಾಂಕಃ **26–12–2021** ರಂದು ಆರೋಪಿ ನಾರಪ್ಪ ಭರತ್ ನನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ಸ್ವಲ್ಪ ಕೆಲಸ ಇದೆ ಈತನನ್ನು ನೋಡಿಕೊಳ್ಳಿ ಎಂದು ಹೇಳಿ ನಮ್ಮ ಮನೆಯಲ್ಲಿ ಬಿಟ್ಟು ಹೋಗಿದ್ದ. ಮರು ದಿನ ಬಂದು ಮಗನನ್ನು ಕರೆದುಕೊಂಡು ಹೋದ.

**5.** ದಿನಾಂಕಃ **06–01–2022** ರಂದು ಅಸಾ–**1** ಕರಿಯಪ್ಪ ಫೋನ್ ಮಾಡಿ ಆರೋಪಿ ಸುಮಾಳನ್ನು ಕೊಲೆ ಮಾಡಿ ಮನೆಯಲ್ಲಿ ಊತುಹಾಕಿದ್ದಾನೆಂದು ತಿಳಿಸಿದ್ದರು.

**6.** ದಿನಾಂಕಃ **07–01–2022** ರಂದು ಬೆಳಗ್ಗೆ ನಾನು ಮತ್ತು ನಮ್ಮ ಊರಿನ ಜನರು ಸೇರಿ ಕೋಣನೂರಿಗೆ ಹೋದೆವು. ಅಲ್ಲಿ ಪೊಲೀಸರು ಬಂದಿದ್ದರು. ಸಾರ್ವಜನಿಕರು ಸೇರಿದ್ದರು. ಮದ್ಯಾಹ್ನ **12.00** ಗಂಟೆಗೆ ಎಸ್.ಪಿ.ಯವರು ಬಂದಿದ್ದರು. ಮನೆ ಒಳಗೆ ಹೋಗಿ ನೋಡಿದಾಗ ಶವವನ್ನು ಅಗೆದು ಹೊರಗೆ ತೆಗೆದಿಟ್ಟಿದ್ದರು. ಶವ ಬಾತುಕೊಂಡಿತ್ತು. ಬಟ್ಟೆಯ ಮೇಲಿಂದ ಅದು ಸುಮಾಳ ಶವ ಎಂದು ಗುರುತಿಸಿದೆವು. ಆರೋಪಿ ಮನೆಯಲ್ಲಿ ಆಕೆಯ ಶವವನ್ನು ಆಕೆಯ ಸಾವು ಯಾರಿಗೂ ಗೊತ್ತಾಗಬಾರದೆಂದು ಊತು ಹಾಕಿದ್ದ. ಆತ ಸುಮಾಳಿಗೆ ಒನಕೆಯಿಂದ ಹೊಡೆದು ಕೊಲೆ ಮಾಡಿ ಆಕೆಯ ಶವವನ್ನು ಊತು ಹಾಕಿದ್ದ. ವರದಕ್ಷಿಣೆ ವಿಚಾರವಾಗಿ ಆಕೆಯನ್ನು ಕೊಲೆ ಮಾಡಿದ್ದ. ನಿಪಿ–**5** ಮತ್ತು **6** ಎಂದು ಗುರುತಿಸಿದ ಫೋಟೋಗಳಲ್ಲಿರುವ ಶವ ಸುಮಾಳದ್ದು ಇರುತ್ತದೆ. ಆ ಫೋಟೋಗಳನ್ನು ಶವ ತೆಗೆದ ಸ್ಥಳ ಅಂದರೆ ಆರೋಪಿಯ ಮನೆಯಲ್ಲಿ ತೆಗೆದಿರುತ್ತದೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಸಿ.ಆರ್. ವಕೀಲರಿಂದಃ</u>**

ಈ ಹಂತದಲ್ಲಿ ಆರೋಪಿ ಪರ ವಕೀಲರು ಎಲ್ಲಾ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಇಲ್ಲದಿದ್ದರೆ ಆರೋಪಿಯ ರಕ್ಷಣೆಗೆ ತೊಂದರೆಯಾಗುವುದು ಎಂದು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.